XI. ಮೈಸೂರು ಪಟ್ಟಣದಲ್ಲಿ ಹೌಸ್ ಕನೆಕ್ಷನ್ ರಿಪೇರಿ ವಿಷಯದಲ್ಲಿ ವಾಟರ್‌ಸಪ್ಲೈ ಮತ್ತು ಸ್ಯೂವರ್ಸ್ ಡಿವೀಜ್ ಎಗ್ಜಿಕ್ಯುಟಿವ್ ಇಂಜನಿಯರವರು ತಯಾರು ಮಾಡಿರುವ ರೂಲ್ಸುಮೇಲೆ ಮ್ಯಾನೇಜಿಂಗ್ ಕಮಿಟಿಯವರು ಮಾಡಿರುವ ತಿದ್ದುಪಾಟುಗಳು.

ಒಪ್ಪಿದೆ.

XII. ಪಟ್ಟಣದಲ್ಲಿರತಕ್ಕ ಪೈಪುಗಳು ಮತ್ತು ಟ್ಯಾಪುಗಳ ರಿಪೇರಿ ವಿಷಯದಲ್ಲಿ (ಚೀಫ್ ಇಂಜನಿಯರರವರ ಅನುಮತಿಯಿಂದ) ಬೋರ್ಡಿನವರ ಅಭಿಪ್ರಾಯವನ್ನು ತಿಳಿಸಬೇಕೆಂದು 1908ನೆ ಇಸವಿ ದಸರಾ 412ನೆ ನಂಬರ್ ಸಬ್ಜಕ್ಟ್ ಕಾಯಿನಿಸಿ ಗೌರ್ನಮೆಂಟು ಸೆಕ್ರಟೆರಿಯವರಿಂದ ತಲಪಿರುವ 5—2—09ನೆ ಮರ್ಕುಂ 7338-9—Ml. 304-08—2ನೆ ನಂಬರ್ ಡಾಕೆಟ್.

ಮ್ಯೂನಿಸಿಪಾಲಿಟಿಯಿಂದ ಲೈಸೆನ್ಸು ಪಡೆದ ಪ್ಲಂಬರ್‌ಗಳಿಂದ ಪೈಪು ಮತ್ತು ಟ್ಯಾಪುಗಳಿಗೆ ಅವಶ್ಯಕವಾದ ರಿಪೇರಿಗಳನ್ನು ಮನೆ ಮಾಲೀಕರು ಮಾಡಿಸಿಕೊಳ್ಳಲು ಅಪ್ಪಣೆ ಕೊಡಬಹುದೆಂದು ತೀರ್ಮಾನಿಸಿದೆ.

XIII. ಬಜ್ಜಟ್ ಗ್ರಾಂಟುಗಳ ರಿ ಅಪ್ರೋಪ್ರಿಯೇಷನ್ ಸ್ಟೇಟ್‌ಮೆಂಟ್.

ಒಪ್ಪಿದೆ.

XIV. ಈ ಪಟ್ಟಣದ ನಾಮಿನೇಟೆಡ್ ಮತ್ತು ಎಲೆಕ್ಟೆಡ್ ಮ್ಯೂನಿಸಿಪಲ್ ಕೌನ್ಸಿಲರುಗಳು 1909ನೆ ಜೂನ್ ಆಖೈರು ವರಿಗೆ ಇರುವಂತೆಯೇ ಇರತಕ್ಕದ್ದೆಂದು ಗೌರ್ನಮೆಂಟಿನಿಂದ ಸಾದರಾಗಿರುವ 3—2—09ನೆ ಮರ್ಕುಂ 7234ನೆ ನಂಬರ್ ನೋಟಿಫಿಕೇಷನ್.

ರಿಕಾರ್ಡು ಮಾಡಿದೆ.

XV. ಮೈಸೂರು ಪಟ್ಟಣದಲ್ಲಿ ಶಿಡುಬು ಹಾಕತಕ್ಕದ್ದಕ್ಕೆ ಒಂದು ತಿಂಗಳು ಪರಿಯಂತರ 4 ಜನ ವ್ಯಾಕ್ಸಿನೇಟರುಗಳನ್ನು ನಿಯಾಮಕ ಮಾಡಿಕೊಳ್ಳಬೇಕೆಂದು ಹೆಲ್ತ್ ಆಫಿಸರವರು ಮಾಡಿರುವ ಪ್ರಪೋಜಲ್.

ಈ ಹಂಗಾಮಿ ವ್ಯಾಕ್ಸಿನೇಟರುಗಳನ್ನು ಪ್ರೆಸಿಡೆಂಟರವರು ಸ್ಯಾಂಕ್ಷನ್ ಮಾಡಿರುವ ಪ್ರಕಾರ ಒಪ್ಪಿದೆ ಮತ್ತು ಅವಶ್ಯವಾದಲ್ಲಿ ಇವರುಗಳನ್ನು ಇನ್ನು ಹೆಚ್ಚುಕಾಲ ಇಟ್ಟುಕೊಳ್ಳಬಹುದೆಂಬುವದನ್ನು ಪ್ರೆಸಿಡೆಂಟರವರ ಆಲೋಚನೆಗೆ ಬಿಟ್ಟು ಇದೆ ಎಂದು ತೀರ್ಮಾನಿಸಿದೆ.

XVI. ಪಟ್ಟಣದಲ್ಲಿ ಹೌಸ್ ಕನೆಕ್ಷನ್‌ಗಳಿಗೆ ವಾಟರ್ ಮೀಟರ್ ಇಡುವ ವಿಷಯದಲ್ಲಿ ಮ್ಯಾನೇಜಿಂಗ್ ಕಮಿಟಿಯವರ ಶಿಫಾರಸು ಮತ್ತು ಇದಕ್ಕೆ ಸಂಬಂಧಪಟ್ಟ ನಡವಳಿಕೆ.

ಮ್ಯಾನೇಜಿಂಗ್ ಕಮಿಟಿಯವರ ಶಿಫಾರಸನ್ನು ಒಪ್ಪಿದೆ ಎಂದು ತೀರ್ಮಾನಿಸಿದೆ.

XVII. ಸ್ಯಾನಿಟೆರಿ ವಿಷಯಗಳಲ್ಲಿ ಹೆಲ್ತ್ ಆಫಿಸರವರು ವೈಸ್ ಪ್ರೆಸಿಡೆಂಟರಾಗಿ ಏನೇನು ಕೆಲಸ ಮಾಡಬೇಕೆಂತಲೂ ಮತ್ತು 12—1—09ನೆ ಮರ್ಕುಂ 6485-6—ಮ್ಯೂ. 127-07ನೆ ನಂಬರು ಗವರ್ನಮೆಂಟ್ ಪ್ರೊಸೀಡಿಂಗ್ಸು 4 ಮತ್ತು 5ನೆ ಪ್ಯಾರಾಗಳ ಪ್ರಕಾರ ಪಬ್ಲಿಕ್ ಹೆಲ್ತ್‌ಗೋಸ್ಕರ ಫಂಡ್ಸು ಗೊತ್ತುಮಾಡಬೇಕೆಂತಲೂ ಹೆಲ್ತ್ ಆಫಿಸರವರಿಂದ ತಲಪಿರುವ 13-2-09ನೆ ಮರ್ಕುಂ 1604ನೆ ನಂಬರ್ ಡಾಕೆಟ್.

ವಾಪಸು ತೆಗೆದುಕೊಂಡಿದಾರೆ.

XVIII. ಚಾಮರಾಜ ಮೊಹಲ್ಲಾದಲ್ಲಿ ಮಿ॥ ಅಂಬಳೆ ಅಂಣಯ್ಯಪಂಡಿತರವರ ಮನೆಗೆ ಪಶ್ಚಿಮ ಭಾಗದಲ್ಲಿರುವ ಖಾಲೀ ಜಾಗವನ್ನು ತೋಳಸೀತೋಟಕ್ಕೆ ಕೊಡಿಸಬೇಕೆಂದು ಮೈಸೂರು ಅರಮನೆ ಅಂಬಾವಿಳಾಸ ಪೊಖ್ತೇಸರ್ ಮಿ॥ ವೆಂಕಟರಮಣಯ್ಯನವರು ಕೊಟ್ಟಿರುವ ಅಪ್ಲಿಕೇಷನ್.

ಚರ್ಚಾಸ್ಪದವಾದ ಖಾಲೀ ಜಾಗವನ್ನು ಖಂಡಿತವಾದ 'ಪರತ್ತುಗಳಮೇಲೆ ದರಖಾಸ್ತುದಾರರಿಗೆ ಕೊಡತಕ್ಕದ್ದೆಂದು ತೀರ್ಮಾನಿಸಿದೆ.

ಎಂ. ಕಾಂತರಾಜ ಅರಸ್, ಪ್ರೆಸಿಡೆಂಟ್.

ಮೈಸೂರು ಸಿಟಿ ಮ್ಯೂನಿಸಿಪಲ್ ಕೌನ್ಸಿಲರವರ ಆಫೀಸಿಗೆ.

ಮ್ಯೂನಿಸಿಪಲ್ ಆಡಿಟರ ರಿಪೋರ್ಟು.

ತಾರೀಖು 20ನೆ ಫೆಬ್ರವರಿ 1909.

ಈ ತಿಂಗಳು 19—2—09ರಲ್ಲಿ ಜನವರಿ ಮಾಹೆ ಲೆಕ್ಕಗಳನ್ನು ಮತ್ತು ವೌಚರು ರಸೀತಿ ವಗೈರೆಯನ್ನು ಆಡಿಟ್ ಮಾಡಲಾಯಿತು.

1. ಮೊಹತರ್ಫಾ ವಗೈರೆ ಜನವರಿ ಮಾಹೆಯಲ್ಲಿ ಎಲ್ಲಾ ಮೊಹಲ್ಲಾದಿಂದ ಸುಮಾರು 1,400 ರೂಪಾಯಿಗಳು ವಸೂಲಾಗಿರುತ್ತೆ. ಇದು ಕ್ರಮವಾಗಿ ನಡೆಯಬೇಕೆಂದು ಪ್ರತಿ ವಸೂಲಿ ಮುತ್ಸದ್ದಿಗಳಿಗೂ ಜವಾನರನ್ನು ಕೊಟ್ಟಿರುತ್ತೆ. ಹೀಗಿರುವಲ್ಲಿ ಮೇಲ್ಕಂಡ ಮೊಬಲಗು ವಸೂಲಿ ಇದರ ಸಿಬ್ಬಂದಿ ಸುಮಾರು 375 ರೂಪಾಯಿ ಆಗುತ್ತೆ. ಇದರಿಂದ ವಸೂಲಿ ವಿಷಯ ತೃಪ್ತಿಕರವಾಗಿ ಕೆಲಸ ನಡೆಯುವದಿಲ್ಲಾ. ದುಬಾರಿ ಸಿಬ್ಬಂದಿ ಖರ್ಚು ಆಗುತ್ತಾ ಇದೆ.

2. ಆಫೀಸಿನಲ್ಲಿ ಎಲ್ಲಾ ಮೊಹಲ್ಲಾ ಜನರಲ್ ಖಾತೆ ಇಡಿಸಿ ಆಯಾಯ ದಿವಸ ವಸೂಲಾದ ಮೊಬಲಗನ್ನು ಆಯಾಯ ದಿವಸ ವಸೂಲಿ ಮುತ್ಸದ್ದಿರವರು ದಾಖಲು ಮಾಡಬೇಕು. ಇದನ್ನು ಕಲೆಕ್ಟರು ಸರಿಯಾದ ಚಕ್ಕು ಮಾಡಬೇಕು.

3. ವಸೂಲಿ ಮುತ್ಸದ್ದೀರವರಲ್ಲಿ ಖಾತೆ ಮತ್ತು ಖಿರದಿ ಪುಸ್ತಕಗಳನ್ನು ಕೊಡುವದಕ್ಕೆ ಬದಲಾಗಿ ಬಿಲ್ಲುಗಳನ್ನು ಕೊಟ್ಟು ವಸೂಲಿ ಕ್ರಮ ನಡೆಸಿ ಚಕ್ಕು ಸರಿಯಾಗಿ ಮಾಡಿದರೆ ವಸೂಲಾತಿ ಸರಿಯಾಗಿ ನಡೆಯುತ್ತೆ.

4. ಈಗ ಹಾಲಿ ಮುತ್ಸದ್ದೀರವರಲ್ಲಿ ಇರುವ ಖಾತೆ ಮತ್ತು ಖಿರದಿ ಪುಸ್ತಕಗಳು ಪ್ರಿಂಟೆಡ್ ನಂಬರಿನಲ್ಲಿ ಇಲ್ಲಾ ಮತ್ತು ಬಹಳವಾಗಿ ಚಿತ್ತು ವಗೈರೆ ಇರುತ್ತೆ ಮತ್ತು ಲೆಖ್ಕಾ ಸಮೇತಾಯಿಷಿ ಸಹ ಆಗುವದು ಕಷ್ಟವಾಗಿರುತ್ತೆ. ಇದನ್ನು ಸರಿಯಾಗಿ ಕ್ರಮಪಡಿಸಬೇಕು.

5. ಇಂಪ್ರೆಸ್ಟು ಮೊಬಲಗು ಈ ಕೆಳಗೆ ನಮೂದು ಮಾಡಿರುವವರಿಂದ ಬಹುಕಾಲದಿಂದ ಯಾತಕ್ಕೆ ವಸೂಲಾಗಿಲ್ಲಾ. ಡಾ॥ ಸಾಹೇಬರವರಿಂದ ರೂ. 69, ಎ. ಕೆ. ಸ್ವಾಮಿ ರೂ. 10, ಕೇಶವದಾರ್ರು ರೂ. 3, ಪಬ್ಲಿಕ್ ಪ್ರಾಸಿಕ್ಯೂಟರು ರೂ. 69—8—6, ಕಲೆಕ್ಟರು ರೂ. 10, ಕಂಠೀರವಾಚಾರ್ರು ರೂ. 5.

(ಸೈ॥ ಡಿ) ಎಸ್. ಶ್ರೀಕಂಠಯ್ಯ.
(ಸೈ॥ ಡಿ) ಕೃಷ್ಣಪ್ಪಾಜಿ. ಅರಸ್.